ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 16-02-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಇತ್ತೀಚೆಗೆ ನಿಧನರಾದ ರಾಜ್ಯ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಕೆ. ಜಗನ್ನಾಥ್ ಶೆಟ್ಟಿ ಅವರ ನಿಧನಕ್ಕೆ ಸಂತಾಪಸೂಚಕ ಸಭೆ: | 17-02-2016 ಬುಧವಾರ ಬೆಳಿಗ್ಗೆ 10-30 ಗಂಟೆಗೆ | ಕೋರ್ಟ್ ಹಾಲ್ ನಂ 1, ಪ್ರಿನ್ಸಿಪಾಲ್ ಬೆಂಚ್, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು. |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಉಪ ಚುನಾವಣೆ ಫಲಿತಾಂಶ

ಬೆಂಗಳೂರು, ಫೆಬ್ರವರಿ 16 (ಕರ್ನಾಟಕ ವಾರ್ತೆ)

ರಾಜ್ಯದ ಬೀದರ್, ದೇವದುರ್ಗ ಹಾಗೂ ಹೆಬ್ಬಾಳ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಫಲಿತಾಂಶ ಇಂದು ಪ್ರಕಟಗೊಂಡಿದ್ದು, ಫಲಿತಾಂಶದ ಪ್ರಮುಖ ವಿವರ ಇಂತಿದೆ:

| ಕ್ರಮ ಸಂಖ್ಯೆ | ಕ್ಷೇತ್ರ ಹೆಸರು ಶೇಕಡ ಮತದಾನ | ಅಭ್ಯರ್ಥಿ ಹೆಸರು | ಪಕ್ಷದ ಹೆಸರು | ಪಡೆದ ಮತಗಳು | ಗೆಲುವಿನ ಅಂತರ |
|---|---|---|---|---|---|
| 1. | ಬೀದರ್ (61%) | ರಹೀಂಖಾನ್ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 69,250 | 22,825 ಗೆಲುವು |
| | | ಪ್ರಕಾಶ್ ಖಂಡ್ರೆ | ಭಾರತೀಯ ಜನತಾ ಪಕ್ಷ | 46,425 | ಸೋಲು |
| | | ಮಹಮ್ಮದ್ ಆಯಾಸ್‌ಖಾನ್ | ಜನತಾ ದಳ (ಜಾತ್ಯಾತೀತ) | 4,307 | ಸೋಲು |

| ಕ್ರಮ ಸಂಖ್ಯೆ | ಕ್ಷೇತ್ರ ಹೆಸರು ಶೇಕಡ ಮತದಾನ | ಅಭ್ಯರ್ಥಿ ಹೆಸರು | ಪಕ್ಷದ ಹೆಸರು | ಪಡೆದ ಮತಗಳು | ಗೆಲುವಿನ ಅಂತರ |
|---|---|---|---|---|---|
| 1. | ದೇವದುರ್ಗ (67.78) | ಕೆ. ಶಿವನಗೌಡ ನಾಯಕ್ | ಭಾರತೀಯ ಜನತಾ ಪಕ್ಷ | 72,647 | 16871 ಗೆಲುವು |
| | | ಎ. ರಾಜಶೇಖರ ನಾಯಕ್ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 55,776 | ಸೋಲು |
| | | ಕರೆಮ್ಮ ಜಿ. ನಾಯಕ್ | ಜನತಾ ದಳ (ಜಾತ್ಯಾತೀತ) | 9156 | ಸೋಲು |

| ಕ್ರಮ ಸಂಖ್ಯೆ | ಕ್ಷೇತ್ರ ಹೆಸರು ಶೇಕಡ ಮತದಾನ | ಅಭ್ಯರ್ಥಿ ಹೆಸರು | ಪಕ್ಷದ ಹೆಸರು | ಪಡೆದ ಮತಗಳು | ಗೆಲುವಿನ ಅಂತರ |
|---|---|---|---|---|---|
| 1. | ಹೆಬ್ಬಾಳ (45%) | ವೈ.ಎ. ನಾರಾಯಣಸ್ವಾಮಿ | ಭಾರತೀಯ ಜನತಾ ಪಕ್ಷ | 60367 | 19149 ಗೆಲುವು |
| . | | ಸಿ.ಕೆ. ಅಬ್ದುಲ್ ರಹೆಮಾನ್ ಷರೀಫ್ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 41218 | ಸೋಲು |
| | | ಇಸ್ಮಾಯಿಲ್ ಷರೀಫ್ ನಾನಾ | ಜನತಾ ದಳ (ಜಾತ್ಯಾತೀತ) | 3666 | ಸೋಲು |

ಬಾಬು:ಜೆಪಿಆರ್

# ವಿಧಾನಸಭೆ ಅಧಿವೇಶನ

ಬೆಂಗಳೂರು, ಫೆಬ್ರವರಿ 16 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಸಭೆಯ ಅಧಿವೇಶನವು ಫೆಬ್ರವರಿ 29 ರಂದು ಅಪರಾಹ್ನ 12-00 ಗಂಟೆಗೆ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಸ್.ವೈ. ಕುಳಗೇರಿ ಅವರು ತಿಳಿಸಿದ್ದಾರೆ.

ಫೆಬ್ರವರಿ 29 ರಂದು ಮಧ್ಯಾಹ್ನ 12-00 ಗಂಟೆಗೆ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡುವರು. ಮಾರ್ಚ್ 1 ರಿಂದ 5 ರವರೆಗೆ ಸರ್ಕಾರಿ ಹಾಗೂ ಖಾಸಗಿ ಕಾರ್ಯಕಲಾಪಗಳು ನಡೆಯಲಿವೆ ಎಂದು ಅವರು ತಿಳಿಸಿದ್ದಾರೆ.

ಬಾಬು:ಜೆಪಿಆರ್.

# ಪಡಿತರ ವಿತರಣೆ

ಬೆಂಗಳೂರು, ಫೆಬ್ರವರಿ 16 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಚೀಟಿದಾರರಿಗೆ ವಿತರಿಸುವ ಸಲುವಾಗಿ 2016 ರ ಫೆಬ್ರವರಿ ಮಾಹೆಗೆ ಆಹಾರಧಾನ್ಯಗಳನ್ನು ಈ ಕೆಳಕಂಡ ಪ್ರಮಾಣ ಹಾಗೂ ದರದಲ್ಲಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿಗಳಿಗೆ ಉಚಿತವಾಗಿ ಆಹಾರಧಾನ್ಯ ವಿತರಣೆಯಾಗುತ್ತಿದ್ದು, ಬಾಗಲಕೋಟೆ ಬೆಳಗಾವಿ, ಬಳ್ಳಾರಿ, ಬೀದರ್, ವಿಜಯಪುರ, ಧಾರವಾಡ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ಉತ್ತರ ಕನ್ನಡ, ಯಾದಗಿರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಕೊಡಗು, ಉಡುಪಿ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಬೆಂಗಳೂರು ಆಹಾರ ಪಡಿತರ ಪ್ರದೇಶದ ಎಎವೈ ಪಡಿತರ ಚೀಟಿಗಳಿಗೆ 29 ಕೆಜಿ ಅಕ್ಕಿ ಹಾಗೂ 6 ಕೆಜಿ ಗೋಧಿ ಹಾಗೂ ಬಿಪಿಎಲ್ ಪಡಿತರ ಚೀಟಿಯ ಪ್ರತಿ ಘಟಕಕ್ಕೆ 3 ಕೆಜಿ ಅಕ್ಕಿ ಹಾಗೂ 2 ಕೆಜಿ ಗೋಧಿ ವಿತರಣಾ ಪ್ರಮಾಣ ನಿಗದಿಪಡಿಸಲಾಗಿದೆ.

ಬೆಂಗಳೂರು ನಗರ, ಹಾಸನ, ಕೋಲಾರ, ಮಂಡ್ಯ, ಮೈಸೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳ ಎಎವೈ ಪಡಿತರ ಚೀಟಿಗಳಿಗೆ 35 ಕೆಜಿ ಅಕ್ಕಿ ಹಾಗೂ ಬಿಪಿಎಲ್ ಪಡಿತರ ಚೀಟಿಯ ಪ್ರತಿ ಸದಸ್ಯನಿಗೆ 5 ಕೆಜಿ ಅಕ್ಕಿ ವಿತರಣಾ ಪ್ರಮಾಣ ನಿಗದಿಪಡಿಸಲಾಗಿದೆ.

ನೋಂದಣಿಯಾದ ಎಪಿಎಲ್ ಪಡಿತರ ಚೀಟಿಯ ಏಕ ಸದಸ್ಯ ಕುಟುಂಬಕ್ಕೆ 5 ಕೆ.ಜಿ. ಆಹಾರಧಾನ್ಯವನ್ನು 3 ಕೆ.ಜಿ. ಅಕ್ಕಿ ಮತ್ತು 2 ಕೆ.ಜಿ. ಗೋಧಿ) ಹಾಗೂ ಒಂದಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ 10 ಕೆ.ಜಿ. ಆಹಾರಧಾನ್ಯವನ್ನು (ತ ಕೆ.ಜಿ. ಅಕ್ಕಿ, 5 ಕೆ.ಜಿ. ಗೋಧಿ) ಪ್ರತಿ ಕೆ.ಜಿ. ಅಕ್ಕಿಗೆ ರೂ 15 ಹಾಗೂ ಪ್ರತಿ ಕೆ.ಜಿ. ಗೋಧಿಗೆ ರೂ 10/- ರ ದರದಲ್ಲಿ ಹಂಚಿಕೆ ನೀಡಲಾಗಿದೆ.

ಎಎವೈ ಮತ್ತು ಬಿಪಿಎಲ್‍ನ ಏಕ ಸದಸ್ಯರ ಮತ್ತು ದ್ವಿ ಸದಸ್ಯ ಅನಿಲ ರಹಿತ ಪಡಿತರ ಚೀಟಿಗಳಿಗೆ 3 ಲೀಟರ್‍ನಂತೆ, ಮೂರು ಮತ್ತು ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗಳಿಗೆ 5 ಲೀಟರ್‍ನಂತೆ ಹಾಗೂ ಗ್ರಾಮಾಂತರ ಪ್ರದೇಶದ ಎಪಿಎಲ್ ಅನಿಲ ರಹಿತ ಪಡಿತರ ಚೀಟಿಗಳಿಗೆ 2 ಲೀಟರ್‍ನಂತೆ ವಿತರಣಾ ಪ್ರಮಾಣವನ್ನು ನಿಗಧಿಪಡಿಸಿ ಹಂಚಿಕೆ ನೀಡಲಾಗಿದೆ.

ಬಾಬು:ಜಿಪಿಆರ್

# ನಕಲಿ ನೋಂದಣಿ ವಿರುದ್ಧ ಕ್ರಮ

ಬೆಂಗಳೂರು, ಫೆಬ್ರವರಿ 16 (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮುಂತ್ರಾಲಯದ ವತಿಯಿಂದ ದಿನಾಂಕ: 8–10–2009 ಮತ್ತು 28–10–2011 ರಲ್ಲಿ ಎಲ್ಲಾ ರಾಜ್ಯದಗಳ ಪ್ರಧಾನ ಕಾರ್ಯದರ್ಶಿಗಳು ಮತ್ತ ಸಾರಿಗೆ ಆಯುಕ್ತರುಗಳಿಗೆ, ನಕಲಿ **HSRP or Anti theft Registration Plates or IND Plate** ಗಳ ತಯಾರಿಕೆ/ಮಾರಾಟ/ಹಂಚಿಕೆ ವಿರುದ್ಧ ಕ್ರಮ ವಹಿಸಲು ತಿಳಿಸಲಾಗಿದೆ. ಅದರಂತೆ ಈಗಾಗಲೇ ಇಂತಹ ನಕಲಿನೋಂದಣಿ ಫಲಕಗಳನ್ನು ಅಳವಡಿಸಿದ ವಾಹನಗಳ ವಿರುದ್ಧ ಸಾರಿಗೆ ಇಲಾಖೆಯಿಂದ ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಇಲಾಖೆಯ ಎಲ್ಲಾ ಆಧೀನ ಕಚೇರಿಗಳಿಗೆ ಸೂಚನೆಗಳನ್ನು ನೀಡಲಾಗಿದ್ದು ಅದರಂತೆ ಕ್ರಮ ಜಾರಿಯಿರುತ್ತದೆ.

ಆದರೆ, ದಿನಾಂಕ: 12/02/2016 ರಂದು ಪ್ರಕಟವಾದ ಪತ್ರಿಕಾ ವರದಿಯಲ್ಲಿ ಸರ್ಕಾರವು ಅತಿ ಸುರಕ್ಷತಾ ನೋಂದಣಿ ಫಲಕಗಳ **(High Security Registration Plate) (HSRP)** ಬಳಕೆಯನ್ನು ಜಾರಿಗೆ ತರದಿದ್ದರೂ ಸಹ, ಇತ್ತೀಚೆಗೆ ಹಲವಾರು ವಾಹನಗಳಲ್ಲಿ ಅತಿ ಸುರಕ್ಷತಾ ನೋಂದಣಿ ಫಲಕಗಳ ಮಾದರಿಯಲ್ಲಿ ಕಾಣುವ ನಕಲಿ ನೋಂದಣಿ ಫಲಕಗಳನ್ನು ಅಳವಡಿಸಿರುವುದಾಗಿ ವರದಿಯಾಗಿದೆ.

ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ನಿಯಮ 50 ಮತ್ತು 51 ರ ಮೇರೆಗೆ ರಾಜ್ಯದಲ್ಲಿ ಅತಿ ಸುರಕ್ಷತಾ ನೋಂದಣಿ ಫಲಕಗಳನ್ನು ಅಳವಡಿಸುವ ಯೋಜನೆಯನ್ನು ಜಾರಿಗೆ ತರಲು ಸಾರಿಗೆ ಇಲಾಖೆಯಿಂದ 15-3-2013 ರಲ್ಲಿ ಕರೆಯಲಾದ ಟೆಂಡರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿಗಳು ಬಾಕಿ ಇರುವ ಕಾರಣ ಸುರಕ್ಷತಾ ನೋಂದಣಿ ಫಲಕಗಳನ್ನು ಅಳವಡಿಸುವ ಯೋಜನೆಯನ್ನು ಜಾರಿಗೊಳಿಸಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ, ನಕಲಿ **HSRP** ನೋಂದಣಿ ಫಲಕಗಳ ತಯಾರಿಕೆ/ಮಾರಾಟ ಮತ್ತು ಸರಬರಾಜು ಮಾಡುವುದು ಮತ್ತು ನಿಯಮಬಾಹಿರ ನೋಂದಣಿ ಫಲಕಗಳ ಅಳವಡಿಕೆಯು ಕಾನೂನು ಬಾಹಿರವಾಗಿರುತ್ತದೆ. ಯಾವುದೇ ವಾಹನ ತಯಾರಕರು/ಡೀಲರರು ಅಥವಾ ಯಾವುದೇ ಆಟೋಮೊಬೈಲ್ ಅಥವಾ ಇತರೆ ವ್ಯಕ್ತಿ/ಸಂಸ್ಥೆಗಳು ನಕಲಿ ನೋಂದಣಿ ಫಲಕಗಳ ತಯಾರಿಕೆ, ಮಾರಾಟ ಮತ್ತು ವಾಹನಗಳಿಗೆ ಅಳವಡಿಸುವುದು ಕಂಡು ಬಂದಲ್ಲಿ ಅಂತಹ ಸಂಸ್ಥೆಗಳು/ವ್ಯಕ್ತಿಗಳ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದೆಂದು ಮತ್ತು ಇಂತಹ ನಕಲಿ ನೋಂದಣಿ ಫಲಕಗಳನ್ನು ವಾಹನಗಳಲ್ಲಿ ಅಳವಡಿಸಬಾರದೆಂದು ಸಾರ್ವಜನಿಕರ ಮಾಹಿತಿಗಾಗಿ ತಿಳಿಸಲಾಗಿದೆ.

ಬಾಬು:ಜಿಪಿಆರ್

# ACTION AGAINST FAKE NUMBERS

Bengaluru, Feb 16th (Karnataka Information)

The Ministry of Road Transport and Highways, New Dew Delhi vide their letter dated 8-10-2009 and 28-10-2011 has instructed the Principal Secretaries and Transport Commissioners of all the States to take action against the manufacturing/selling/distribution of fake High Security Registration Plates or IND Plates. Accordingly the Transport Department in Karnataka has instructed all the subordinate offices to take stringent action against the vehicles fitted with fake number plates and action is in force.

But, as report published in the newspaper on 12-2-2016, many vehicle have been fitted with fake number plates looks alike High Security Registration Plates eventhough the Government has not implemented the scheme of fitment of High Securtity Registration Number plates to the vehicles in Karnataka.

As per Rule 50 and 50 of Central Motor Vehicles Rules, the Transport Department has issued Tender Notification No. CT/RGN-1/PR-859/2010-11 dated 15-3-2013 for implementation of High Secruity Registration Plates scheme and the same has not been implemented due to pending of the writ petitions filed before the Hon'ble High Court of Karnataka by questioning the said tender process.

Hence, the manufacturing/selling & supply of fake High Security Registration Plates and fitment of such number plates is against the law. If any vehicle manufacturer/dealer or any automobile or other person/institutions found involved in manufacturing, selling and fitment of fake number plates, legal action will be initiated against such institutions/companies/persons. Public are hereby informed not to fit such fake registration number plates to the vehicles.

babu:gpr